**ಅಸಲು ದಾವೆ ಸಂಖ್ಯೆ -50/2020**

**ಡಿ.ಡಬ್ಲ್ಯೂ- 1**

**<u>ದಿನಾಂಕ 13-08-2025 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು ಃ ಶ್ರೀ.ಎಮ್.ಎ.ಎಚ್ ವಕೀಲರಿಂದ ವಾದಿ ಪರವಾಗಿ</u>**

1. 1976 ರಲ್ಲಿ ನಿಮ್ಮ ಪ್ರಕಾರ ವಿಭಾಗ ಆಗಿದೆ ಎಂದು ನೀವು ಹೇಳಿದ್ದು, ಸದರಿ ವಿಭಾಗ ಪತ್ರವನ್ನು ನೀವು ಯಾವಾಗ ನೋಡಿದ್ದೀರಿ ಎಂದರೆ ಕ್ರಯದಸ್ತು ಆಗುವ ಮೊದಲು ನೋಡಿದ್ದೇನೆ ಎಂದು ಹೇಳುತ್ತಾರೆ. ಸದರಿ ದಾಖಲಾತಿಯನ್ನು ನಿಮಗೆ ಯಾರು ತೋರಿಸಿದರು ಚಿನ್ನವ್ವ ಹಣಮಪ್ಪ ಪಾಟೀಲ ಅವರು ತೋರಿಸಿದರು ಎಂದು ಹೇಳುತ್ತಾರೆ. ಯಾರ ಹೆಸರಿಗೆ, ಯಾವ ಆಸ್ತಿಗಳು ಪಾಲು ಬಂದಿವೆ ಎಂದು ಗೊತ್ತಿದೆಯಾ ಎಂದರೆ ಗೊತ್ತಿದೆ ಎಂದು ಹೇಳುತ್ತಾರೆ. ಸದರಿ ವಿಭಾಗ ಪತ್ರದಲ್ಲಿ

ಒಟ್ಟು ಎಷ್ಟು ಆಸ್ತಿಗಳು ಇದ್ದವು ಎಂದರೆ ಸಾಕ್ಷಿಯು ಒಟ್ಟು ಎಷ್ಟು ಆಸ್ತಿಗಳು ಇದ್ದವು ಎಂದು ಹೇಳಲು ಬರುವುದಿಲ್ಲ, ಪ್ರತ್ಯೇಕ ಹಿಸ್ಸಾದಾರರ ಆಸ್ತಿ ಇದ್ದವು ಎಂದು ಹೇಳಬಹುದು ಎಂದು ಸಾಕ್ಷಿ ಹೇಳುತ್ತಾರೆ. ಪ್ರತ್ಯೇಕ ಹಿಸ್ಸಾದಾರರ ಆಸ್ತಿ ವಿವರಗಳನ್ನು ಹೇಳಬಹುದಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸಾಕ್ಷಿ ಖರೀದಿಸಿದ ಆಸ್ತಿ ವಿವರ ಮಾತ್ರ ಹೇಳಬಹುದು ಎಂದು ಸಾಕ್ಷಿ ಹೇಳುತ್ತಾರೆ. ನೀವು ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 3 ನೇ ಕಂಡಿಕೆಯಲ್ಲಿ ಮಲ್ಲಪ್ಪ ಅವರ ಪಾಲಿಗೆ ಯಾವ ಯಾವ ಆಸ್ತಿಗಳು ಹೋದವು ಎಂದು ಹೇಳಿ ಬರೆಸಿದ್ದೀರಾ ಎಂದರೆ ಬರೆಸಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ವಿಭಾಗ ಪತ್ರವನ್ನು ಹೊರತುಪಡಿಸಿ ಬೇರೆ ಯಾವ ದಾಖಲಾತಿಗಳನ್ನು ಕ್ರಯದಸ್ತು ಮಾಡಿಕೊಳ್ಳುವಾಗ ನೋಡಿದ್ದೀರಿ ಎಂದರೆ ಉತಾರೆ ನೋಡಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ವಿಭಾಗ ಪತ್ರಗಳಲ್ಲಿ ನಮೂದಿಸಿದಂತೆ ಯಾವುದೇ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. ಹಣಮಂತ ಅವರ ಜೀವಿತಾವಧಿಯಲ್ಲಿ ವಿಭಾಗ ಪತ್ರದಂತೆ ಆಸ್ತಿಯಲ್ಲಿ ಹೆಸರು ನಮೂದಿಸುವಂತೆ ಹಣಮಂತ ಅವರು ವರದಿ ನೀಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರ ಮೃತ್ಯುವಿನ ನಂತರ ಅವರ ಹೆಂಡತಿ ಚಿನ್ನವ್ವ ವರದಿ ನೀಡಿದ್ದಾರೆ ಎಂದು ಹೇಳುತ್ತಾರೆ. ಸದರಿ ವಿಭಾಗ ಪತ್ರ ಖೊಟ್ಟಿ ಇದ್ದ ಕಾರಣ ಯಾವುದೇ ವರದಿ ಹಣಮಂತ ಅವರು ನೀಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ನಿಡಿ-4 ನ್ನು ತೋರಿಸುತ್ತಿದ್ದು ಮಲ್ಲಪ್ಪ ಅವರ ಪಾಲಿಗೆ ಸರ್ವೆ ನಂ.130/1, 6/2, 8/2, 8/3 ಹಾಗೂ 9/3 ರ ಆಸ್ತಿಗಳು ಬಂದಿವೆ ಎಂದರೆ ಸರಿ. ಸದರಿ ಆಸ್ತಿಗಳು ಯಾರ ಹೆಸರಿನಲ್ಲಿ ಇದ್ದವು ಎಂದರೆ ಅವರ ತಂದೆಯ ಹೆಸರಿನಲ್ಲಿ ಇದ್ದವು ಎಂದು ಸಾಕ್ಷಿ ಹೇಳುತ್ತಾರೆ. ಹಣಮಪ್ಪ, ಮಲ್ಲಪ್ಪ, ರಾಮಚಂದ್ರಪ್ಪ ಅವರ ತಂದೆ ತಮ್ಮಣ್ಣ ಅವರು ತೀರಿಕೊಂಡ ನಂತರ ಕೇವಲ ಸರ್ವೆ ನಂ.6/2, 8/3, 130/1 ಮತ್ತು ಸರ್ವೆ ನಂ.144 ರ ಆಸ್ತಿಗಳು ಮಾತ್ರ ವಾರಸಾ ನಾತೆಯಿಂದ ಬಂದಿವೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.8/2 ಮತ್ತು 9/3 ರ ಆಸ್ತಿಗಳು ವಿಭಾಗ ಪತ್ರದಲ್ಲಿ ಹೇಗೆ ನಮೂದು ಆದವು ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸರ್ವೆ ನಂ.8/2 ಮತ್ತು 9/3 ಇವು ಬೇರೆಯವರಿಗೆ ಸಂಬಂಧಪಟ್ಟ ಆಸ್ತಿಗಳು ಎಂದರೆ ನನಗೆ ಗೊತ್ತಿಲ್ಲ. 2 ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗೆ ಸಂಬಂಧಪಟ್ಟಿಲ್ಲದ್ದರಿಂದ ಸದರಿ ವಿಭಾಗ ಪತ್ರ ಅಪೂರ್ಣ ವಿಭಾಗ ಪತ್ರ ಎಂದರೆ ಸರಿಯಲ್ಲ. ಸರ್ವೆ ನಂ.144 ಫಲವತ್ತಾದ ಜಮೀನು ಇರುವ ಕಾರಣ ಸದರಿ ಆಸ್ತಿಯನ್ನು ನಿಮಗೆ ಮಾರಾಟ ಮಾಡಬೇಕು ಎಂದು ನೀವು ಮಲ್ಲಪ್ಪ ಮತ್ತು ಹಣಮಂತ ಅವರಿಗೆ ಕೇಳಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಮಲ್ಲಪ್ಪ ಅವರಿಗೆ ಸದರಿ ಆಸ್ತಿ ಮಾರಾಟ ಮಾಡುವುದು ಒಪ್ಪಿಗೆ ಇರಲಿಲ್ಲ ಎಂದರೆ ನಾನು ಚಿನ್ನವ್ವ ಅವರಿಂದ ಆಸ್ತಿ ಖರೀದಿಸಿದ್ದು, ಮಲ್ಲಪ್ಪ ಅವರಿಗೆ ಕೇಳಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಹಣಮಂತ ಅವರು ತೀರಿಕೊಂಡ ನಂತರ ಅವರ ಹೆಂಡತಿ

ಚಿನ್ನವ್ವ ಮತ್ತು ಮಲ್ಲಪ್ಪ ಅವರು ಜಂಟಿಯಾಗಿ ಸದರಿ ಆಸ್ತಿಯ ಸ್ವಾಧೀನದಲ್ಲಿ ಇದ್ದ ಕಾರಣ ತಾವು ಅವರಿಬ್ಬರಿಗೂ ಆಸ್ತಿ ಮಾರಾಟ ಮಾಡುವಂತೆ ಕೇಳಿಕೊಂಡಿರಿ ಎಂದರೆ ಸರಿಯಲ್ಲ. ಚಿನ್ನವ್ವ ಅವರಿಗೆ ಒಪ್ಪಿಗೆ ಇದ್ದು, ಮಲ್ಲಪ್ಪ ಅವರಿಗೆ ಮಾರಾಟ ಮಾಡಲು ಒಪ್ಪಿಗೆ ಇರಲಿಲ್ಲ ಎಂದರೆ ಮಲ್ಲಪ್ಪ ಅವರಿಗೆ ನಮಗೆ ಸಂಬಂಧ ಇರಲಿಲ್ಲ ಎಂದು ಹೇಳುತ್ತಾರೆ. ಫಲವತ್ತಾದ ಜಮೀನು ಕಬಳಿಸುವ ಉದ್ದೇಶದಿಂದ 1976 ರ ಅಪೂರ್ಣ ವಿಭಾಗ ಪತ್ರವನ್ನು ಲಗತ್ತಿಸಿ ಮಲ್ಲಪ್ಪ ಅವರ ಹೆಸರನ್ನು ನೀವು ಕಡಿಮೆ ಮಾಡಿಸಿದಿರಿ ಎಂದರೆ ಸರಿಯಲ್ಲ.

2. ನೀವು ಮಲ್ಲಪ್ಪ ಅವರ ಕಡೆಯಿಂದ ಸದರಿ ಅಪೂರ್ಣ ವಿಭಾಗ ಪತ್ರವನ್ನು ಕಾನೂನುಬದ್ದಗೊಳಿಸಲು ಮಲ್ಲಪ್ಪ ಅವರ ಕಡೆಯಿಂದ 144/1982 ನ್ನು ಸಲ್ಲಿಸುವಂತೆ ಮಾಡಿದ್ದೀರಿ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನೀವು ಸಹ ಪಕ್ಷಗಾರರು ಎಂದರೆ ಸರಿ. ನೀವು ಸದರಿ ದಾವೆಯಲ್ಲಿ ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸರಿಯಲ್ಲ. ನೀವು ವಿಭಾಗ ಪತ್ರವನ್ನು ಒಪ್ಪಿಕೊಳ್ಳುವಂತೆ ಮಲ್ಲಪ್ಪ ಅವರಿಗೆ ಒತ್ತಾಯ ಮಾಡಿದಿರಿ ಎಂದರೆ ಸರಿಯಲ್ಲ. ನೀವು ಆಸ್ತಿಯನ್ನು ಯಾವ ದಿನಾಂಕದಂದು ಖರೀದಿಸಿದಿರಿ ಎಂದರೆ 1982 ರಲ್ಲಿ ಖರೀದಿಸಿದ್ದು ದಿನಾಂಕ ಹೇಳಲು ಬರುವುದಿಲ್ಲ ಎಂದು ಹೇಳುತ್ತಾರೆ. ನೀವು ಖರೀದಿಸಿದಾಗ ಅಸಲು ದಾವಾ ಸಂಖ್ಯೆ 144/1982 ಚಾಲ್ತಿ ಇತ್ತು ಎಂದರೆ ಸರಿಯಲ್ಲ. ಪಿ.ಎಲ್.ಡಿ ಬ್ಯಾಂಕನವರು ದಾವಾ ಆಸ್ತಿಯನ್ನು ಮಲ್ಲಪ್ಪ ಮತ್ತು ಚಿನ್ನವ್ವ ಅವರು ಒತ್ತೆ ಇಟ್ಟು ಸಾಲ ಪಡೆದಿದ್ದರಿಂದ ಅದನ್ನು ಅಟ್ಯಾಚ್ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಮಲ್ಲಪ್ಪ ಅವರು ಸದರಿ ಆಸ್ತಿ ಒತ್ತೆ ಇಟ್ಟ ಕಾರಣ ಅದನ್ನು ಯಾರು ಮಾರಾಟ ಮಾಡಬಾರದು ಎಂದು ದಿಃ28.08.1982 ರಂದು ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಮೇಲೆ ಹೇಳಿದಂತೆ ಎಲ್ಲಾ ತಕರಾರುಗಳಿದ್ದರಿಂದ ತಾವು ಆಸ್ತಿಯನ್ನು ಕಾನೂನುಬದ್ದವಾಗಿ ಖರೀದಿಸಿಲ್ಲ ಎಂದರೆ ಸರಿಯಲ್ಲ. ಚಿನ್ನವ್ವ ಅವರು ತಮ್ಮ ಜೀವಿತಾವಧಿಯಲ್ಲಿ ಕೇವಲ ಆಸ್ತಿಯನ್ನು 12 ವರ್ಷದ ಲೀಜ್ ಮೇಲೆ ನೀಡಿದ್ದಾರೆ ಎಂದರೆ ಸರಿಯಲ್ಲ. ಲೀಜ್ ಅವಧಿ ಮುಗಿದ ನಂತರ ಮಲ್ಲಪ್ಪ ಅವರ ವಾರಸುದಾರರು ಆಸ್ತಿಯನ್ನು ಹಿಂದಿರುಗಿಸಬೇಕು ಎಂದು ಕೇಳಿದಾಗ ನೀವು ನಿರಾಕರಿಸಿದ್ದರಿಂದ ಈ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಯಾವುದೇ ವಿಭಾಗ ಕಾನೂನುಬದ್ದವಾಗಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ದಾವಾ ಆಸ್ತಿ ವಾದಿಯವರಿಗೆ ಸೇರಿದ್ದು ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿದ್ದು, 4 ನೇ ಪ್ರತಿವಾದಿ ಪರ ವಕೀಲರು ಯಾವುದೇ ಪ್ರತಿವಾದ ಪತ್ರ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ                ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ